‘ಇಲ್ಲ ಸರ್, ನಮ್ಮ ಬ್ಯಾಂಕ್‌ನಲ್ಲಿ ಹಾಕಿದರೆ ಗೊತ್ತಾಗುತ್ತೆ ಅಂತಾ ಈ ಅಕೌಂಟ್‌ಗೆ ಹಾಕಿಸಿದೆ.’

ಅದ್ಯಾಕೋ ನಾಗೇಶನಿಗೆ ಒಮ್ಮೆ ರಾಕೇಶನ ಮೇಲೆ ಸಣ್ಣದೊಂದು ನಂಬಿಕೆ ಬರತೊಡಗಿತು. ಎಂಥಾ ಕ್ರಿಮಿನಲ್ ಆದರೂ ಅದಷ್ಟೂ ಬೇಗ ಕ್ರೈಂ ಸೀನ್‌ನಿಂದ ದೂರ ಹೋಗಲು ಯತ್ನಿಸುತ್ತಾನೆ. ಇವನಿಗಿದ್ದದ್ದು ಹದಿನೈದು ನಿಮಿಷ, ಅಷ್ಟರಲ್ಲಿ ಅಲ್ಲಿಂದ ಓಡಿ ಹೋಗಬಹುದಿತ್ತು. ಹೋಗಿಲ್ಲ... ಕ್ರೈಂ ಸೀನ್ ಅನ್ನು ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುವಷ್ಟು ಬದಲಾಯಿಸುವ ಚಾಕಚಕ್ಯತೆ ಕಾಣುತ್ತಿಲ್ಲ... ಆದರೆ ಅವನ ಮುಂದೆ ಇದ್ದ ಎರಡು ಉತ್ತರವಿಲ್ಲದ ಪ್ರಶ್ನೆಗಳು – ರಾಕೇಶನ ಪ್ರಕಾರ ನಾವು ಬರುವ ಐದು ನಿಮಿಷದ ಹಿಂದೆ ಕೃಷ್ಣನ್ ಆತ್ಮಹತ್ಯೆ ಮಾಡಿಕೊಂಡರು. ಹಾಗಾದರೆ ಹದಿನೈದು ನಿಮಿಷದ ಕೆಳಗೆ ನಮಗೆ ಫೋನ್ ಮಾಡಿದವರು ಯಾರು ?

ಕೃಷ್ಣನ್ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದರೆ ಇವನಿಗೆ ಯಾಕೆ ಐದು ಕೋಟಿ ಕೊಡುತ್ತಿದ್ದರು... ಅಂಥದ್ದೇನಿತ್ತು?

ಅವನ ಗಮನ ಕೃಷ್ಣನ್ ಅವರ ಹೆಂಡತಿಯ ಮೇಲೆ ಹೋಯಿತು... ಪ್ರೀತಿ–ಪ್ರೇಮ ಏನುಬೇಕಾದರೂ ಮಾಡಿಸಬಹುದು!

‘ನಿಮ್ಮ ಬಳಿ ಯಾವ ಶಂಕಿತರೂ ಇಲ್ಲದಿದ್ದರೆ ಕ್ರೈಂ ಸೀನ್‌ನ ಹತ್ತಿರ ಇರುವವರೂ ದೂರ ಇರುವವರೂ ಶಂಕಿತರೆ’ ಎನ್ನುವ ಪೊಲೀಸ್ ಮಾತುಗಳು ನೆನಪಾಗಿ–‘ಮೇಡಂ, ಈ ಘಟನೆ ನಡೆದಾಗ ನೀವೆಲ್ಲಿ ಇದ್ರಿ?’ ಎಂದು ಕೇಳಿದ.

‘ನಾನು ಶಾಪಿಂಗ್‌ಗೆ ಹೋಗಿದ್ದೆ. ನಿಮ್ಮ ಫೋನ್ ಬಂದ ತಕ್ಷಣ ಬಂದೆ.’

‘ನಾವು ಕರೆ ಮಾಡಿದ ಹತ್ತು ನಿಮಿಷದಲ್ಲಿ ಇಲ್ಲಿಗೆ ಬಂದ್ರಿ. ಅಂದರೆ ನೀವು ಈ ಮನೆಯಿಂದ ಹತ್ತು ನಿಮಿಷದ ದೂರದಲ್ಲಿ ಇದ್ರಿ ಅಂತಾಯಿತು.’

‘ನೀವು ಏನು ಹೇಳುತ್ತಿದ್ದೀರಾ... ನನಗರ್ಥ ಆಗುತ್ತಿಲ್ಲ...’ ಸಿಡುಕಿನ ದನಿಯಲ್ಲಿ ನುಡಿದಳು. ಅವಳ ನಡೆ ನುಡಿಯಲ್ಲಿ ಅಹಂಕಾರ ಇತ್ತು. ತನ್ನ ಕಣ್ಮುಂದೆ ಪತಿಯ ಶವ ಇದೆ ಅನ್ನುವ ಬೇಸರ, ದುಃಖ, ಭಯ ಕೊಂಚವೂ ಇರಲಿಲ್ಲ ಅವಳಲ್ಲಿ.

‘ನೀವಿಬ್ಬರೂ ಸೇರಿ ಕೃಷ್ಣನ್ ಅವರ ಕೊಲೆ ಮಾಡಿ ಈ ರಾಕೇಶನನ್ನು ಕ್ರೈಂ ಸೀನ್ ಕ್ಲೀನ್ ಮಾಡಲು ಬಿಟ್ಟು ನೀವು ಯಾಕೆ ಹೋಗಿರಬಾರದು... ನಿಮ್ಮ ಮನೆಯಲ್ಲಿ ಸಿ.ಸಿ. ಟೀವಿ ಬೇರೆ ಇಲ್ಲ ಚೆಕ್ ಮಾಡಲು...’

‘ಮೊದಲು ನಿಮಗೆ ಫೋನ್ ಮಾಡಿದ್ದು ಯಾರು ಅಂತಾ ತಿಳಿದುಕೊಳ್ಳಿ. ಅವರಿಗೆ ಗೊತ್ತಿರಬಹುದು ಏನಾಯಿತು ಇಲ್ಲಿ ಅಂತಾ, ಸುಮ್ಮನೆ ಇಲ್ಲ ಸಲ್ಲದ ಅಪಾದನೆ ಮಾಡಬೇಡಿ.’ ಅದೇ ದುರಹಂಕಾರದ ಮಾತುಗಳು.

ಕೋಟ್ಯಂತರ ರೂಪಾಯಿಗಳ ಆಸ್ತಿ ಇನ್ನು ತನ್ನದೇ ಎನ್ನುವ ದುರಹಂಕಾರ ಆಗಲೇ ಬಂದಿದೆ ಎಂದುಕೊಂಡ ನಾಗೇಶ್.

‘ಆ ಫೋನ್ ನೀವೇ ಯಾಕೆ ಮಾಡಿರಬಾರದು? ರಾಕೇಶ್ ಇರುವಂತೆಯೇ ಪೋಲಿಸ್ ಬಂದರೆ ಅವನು ಕೊಲೆ ಆಪಾದನೆಯಿಂದ ಅರೆಸ್ಟ್ ಆದರೆ ಆಸ್ತಿಯೂ ನಿಮಗೆ, ಮತ್ತೆ ಹೊಸ ಜೀವನ ನಡೆಸುವ ಅವಕಾಶ...’ ವ್ಯಂಗ್ಯವಾಗಿ ಪ್ರಶ್ನಿಸಿದ ಇನ್‌ಸ್ಪೆಕ್ಟರ್ ನಾಗೇಶ್.

ರಾಕೇಶ್ ದಂಗಾದ.